# ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ • ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ಊಟಿ ರಸ್ತೆ, ಮೈಸೂರು-570 025, ಕರ್ನಾಟಕ

☎ 0821-2548236 & 2548380 Fax: 0821-2548238 E-mail: jssautonomous@gmail.com


ದಿನಾಂಕ 17.09.2016

## ಪ್ರಕಟಣೆಯ ಕೃಪೆಗಾಗಿ

## ಗುರಿ ಸಾಧನೆಯಲ್ಲಿ ಪರಿಶ್ರಮದೊಂದಿಗೆ ಮೌಲ್ಯಗಳು ಮುಖ್ಯ

– ಶ್ರೀ ಕೆ.ಟಿ. ಶ್ರೀಕಂಠೇಗೌಡ

'ವಿದ್ಯಾರ್ಥಿಗಳಿಗೆ ಛಲ ಮತ್ತು ಕನಸುಗಳಿರಬೇಕು. ನಿರ್ದಿಷ್ಟ ಗುರಿಯೊಂದಿಗೆ ಪರಿಶ್ರಮಪಡಬೇಕು. ಆಗ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕೇ ಸಿಗುತ್ತದೆ. ಆದರೆ ಗುರಿಸಾಧನೆಯಲ್ಲಿ ಪರಿಶ್ರಮದೊಂದಿಗೆ ಮೌಲ್ಯಗಳನ್ನು ರೂಢಿಸಿಕೊಳ್ಳಬೇಕು' ಎಂದು ವಿಧಾನ ಪರಿಷತ್‌ನ ಸದಸ್ಯರಾದ ಶ್ರೀ ಕೆ.ಟಿ. ಶ್ರೀಕಂಠೇಗೌಡರು ಹೇಳಿದರು.

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪದವಿ ವಿದ್ಯಾರ್ಥಿ ವೇದಿಕೆಗಳ ಉದ್ಘಾಟನಾ ಸಮಾರಂಭದ ಉದ್ಘಾಟನೆಯನ್ನು ನೆರವೇರಿಸಿ ಅವರು ಮಾತನಾಡುತ್ತಿದ್ದರು. 'ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳು ವ್ಯಕ್ತಿತ್ವ ವಿಕಸನಕ್ಕೆ ಅತ್ಯಗತ್ಯವಾದವು. ಪಠ್ಯದಲ್ಲಿ ಎಷ್ಟು ಆಸಕ್ತಿ ವಹಿಸುತ್ತೇವೆ ಅಷ್ಟೇ ಆಸಕ್ತಿಯನ್ನು ಪಠ್ಯೇತರ ಚಟುವಟಿಕೆಗಳಲ್ಲೂ ವಹಿಸಬೇಕು. ಛಲ ಮತ್ತು ಗುರಿಯೊಂದಿಗೆ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಸಾಧನೆ ಮಾಡಬೇಕು. ಅದಕ್ಕೆ ಇಂತಹ ವೇದಿಕೆಗಳು ಪೂರಕ ವಾತಾವರಣವನ್ನು ಕಲ್ಪಿಸುತ್ತವೆ. ಇವುಗಳ ಪ್ರಯೋಜನವನ್ನು ನೀವು ಪಡೆದು ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ. ಸವಾಲುಗಳನ್ನು ಎದುರಿಸುವ ರೀತಿಯಲ್ಲಿ ವ್ಯಕ್ತಿತ್ವ ವಿಕಸನವಾಗಬೇಕು. ಆಗ ಮಾತ್ರ ಶ್ರೀ ರಾಜೇಂದ್ರ ಶ್ರೀಗಳ ಕನಸು ಮತ್ತು ಶ್ರಮಕ್ಕೆ ಸಾರ್ಥಕತೆ ಬರುತ್ತದೆ' ಎಂದರು.

ಚಾಮರಾಜನಗರ ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷರಾದ ಶ್ರೀ ಎಸ್. ಬಸವರಾಜು ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಾ 'ಇಂದು ಪ್ರತಿಯೊಬ್ಬರಲ್ಲೂ ಶಿಕ್ಷಣದ ಅರಿವಿದೆ. ಆದರೆ ಅಷ್ಟರಿಂದಲೇ ವ್ಯಕ್ತಿತ್ವ ಪರಿಪೂರ್ಣತೆಯನ್ನು ಪಡೆದುಕೊಳ್ಳುವುದಿಲ್ಲ. ಶಿಕ್ಷಣದ ಜೊತೆಗೆ ಸಾಂಸ್ಕೃತಿಕ ಅರಿವು ಬಹು ಮುಖ್ಯವಾದುದು. ಇದು ನಮ್ಮ ಬದುಕನ್ನು ವಿಭಿನ್ನವಾದ ಶೈಲಿಯಲ್ಲಿ ಅರ್ಥಪೂರ್ಣವಾಗಿ ರೂಪಿಸಬಲ್ಲುದು' ಎಂದು ಹೇಳಿದರು.

ಮತ್ತೊರ್ವ ಮುಖ್ಯ ಅತಿಥಿಗಳಾದ ಕ್ರೀಡಾ ಅಂಕಣಕಾರರರಾದ ಶ್ರೀ ಸಿ.ಕೆ. ಮುರುಳೀಧರನ್ ಅವರು ಮಾತನಾಡುತ್ತಾ 'ಕ್ರೀಡೆಯನ್ನು ಒಳಗೊಂಡಂತೆ ಪಠ್ಯೇತರ ಚಟುವಟಿಕೆಗಳು ಮಾನವೀಯ ಮೌಲ್ಯಗಳನ್ನು ಸದಾ ಜಾಗೃತವಾಗಿರಿಸುತ್ತವೆ. ವಿಶಾಲ ದೃಷ್ಟಿಕೋನವನ್ನು ಬೆಳೆಸುತ್ತವೆ. ಜಾಗತೀಕರಣದ ಇಂದಿನ ಜೀವನ ಶೈಲಿಯಲ್ಲಿ ದೈಹಿಕ ಮತ್ತು ಮಾನಸಿಕ ಆರೋಗ್ಯಕ್ಕೆ ಇವು ಅತ್ಯವಶ್ಯಕ' ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜು ಸಮುಚ್ಚಯದ ಮುಖ್ಯ ಕಾರ್ಯನಿರ್ವಾಹಕರಾದ ಪ್ರೊ. ಬಿ.ವಿ. ಸಾಂಬಶಿವಯ್ಯನವರು ಮಾತನಾಡುತ್ತಾ 'ಮೇಡಂ ಕ್ಯೂರಿ ಮತ್ತು ಅವರ ಇಡೀ ಕುಟುಂಬ ವಿಜ್ಞಾನಕ್ಕೆ ಸಲ್ಲಿಸಿದ ಸೇವೆ ನಮಗೆ ಮಾದರಿಯಾಗಬೇಕು. ಪರಿಶ್ರಮ ಮತ್ತು ನಿರ್ದಿಷ್ಟ ಗುರಿಯೊಂದಿಗೆ ಶ್ರಮಿಸಿದಾಗ ಯಶಸ್ಸು ನಮ್ಮನ್ನು ಹುಡುಕಿ ಬರುತ್ತದೆ. ಇಂದು ಶಿಕ್ಷಣ ಉದ್ಯೋಗ ಆಧಾರಿತವಾಗಿರಬೇಕಾದುದು ಅನಿವಾರ್ಯ. ಆ ಹಿನ್ನೆಲೆಯಲ್ಲಿ ಕೌಶಲ್ಯ ಆಧಾರಿತ ಶಿಕ್ಷಣಕ್ಕೆ ಒತ್ತುಕೊಟ್ಟಿರುವ ಕೇಂದ್ರ ಮಾನವ ಸಂಪನ್ಮೂಲ ಇಲಾಖೆ ಮತ್ತು ಯುಜಿಸಿ ಅಭಿವೃದ್ಧಿ ಪಡಿಸಿರುವ ಮಾದರಿ ಅನ್ವಯ ಕಾಲೇಜಿನಲ್ಲಿ ಕೌಶಲ್ಯ ಆಧಾರಿತ ಅಡ್ವಾನ್ಸ್ ಡಿಪ್ಲೊಮಾ, ಬಿ.ವೋಕ್ ಮತ್ತು ಎಂ.ವೋಕ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ಅವುಗಳ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆಯಬೇಕು. ನಮ್ಮ ಕಾಲೇಜು ರಾಷ್ಟ್ರದ ಪ್ರತಿಷ್ಠಿತ ಕಾಲೇಜುಗಳಲ್ಲಿ ಒಂದಾಗಿದೆ. ನಿಮ್ಮ ಸಾಧನೆಗೆ ಬೇಕಾದ ಎಲ್ಲ ಅಗತ್ಯಗಳನ್ನು ಒದಗಿಸುತ್ತದೆ. ಅವುಗಳನ್ನು ಬಳಸಿಕೊಂಡು ನಿಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಿ' ಎಂದು ಕರೆ ನೀಡಿದರು.

ವಿದ್ಯಾರ್ಥಿಗಳಾದ ಕೆ.ಎಸ್. ಪ್ರಜ್ವಲ್ ಸ್ವಾಗತಿಸಿದರು. ಕು. ಎ.ಎಸ್. ಪೂರ್ಣಿಮ ಪ್ರಾರ್ಥಿಸಿದರು. ಪ್ರವೀಣ್ ನಿರೂಪಿಸಿದರು. ಲಿಖಿತ್ ಕುಮಾರ್ ವಂದಿಸಿದರು. ಪ್ರಾಂಶುಪಾಲರಾದ ಪ್ರೊ. ಎಂ. ಮಹದೇವಪ್ಪನವರು, ಸಾಂಸ್ಕೃತಿಕ ವೇದಿಕೆಯ ಸಂಚಾಲಕರಾದ ಶ್ರೀಮತಿ ಸುಜಾತ ಕುಮಾರಿಯವರು ಮತ್ತು ಕ್ರೀಡಾ ವೇದಿಕೆಯ ಸಂಚಾಲಕರಾದ ಶ್ರೀ ಟಿ. ಅರವಿಂದ್ ಅವರು ಉಪಸ್ಥಿತರಿದ್ದರು.

ಗೆ,

ಸಂಪಾದಕರು

------------------

------------------

ಪ್ರಾಂಶುಪಾಲರು

ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು

(ಸ್ವಾಯತ್ತ)

ಊಟಿ ರಸ್ತೆ, ಮೈಸೂರು-570 025